# AKKAMAHADEVI WOMEN'S UNIVERSITY, VIJAYAPURA

……………………………………………………………………………

**DATE: 14-11-2017**

## ಪತ್ರಿಕಾ ಪ್ರಕಟಣೆಗಾಗಿ

ವಿಜಯಪುರ: ದೇಶದ ಮೊದಲ ಶಿಕ್ಷಣಮಂತ್ರಿ, ಭಾರತ ವಿಭಜನೆಯನ್ನು ವಿರೋಧಿಸಿ ಬ್ರಿಟಿಷರ ವಿರುದ್ಧ ಹೋರಾಡಿದ ಸ್ವಾತಂತ್ರ ಸೇನಾನಿ ಮೌಲಾನಾ ಅಬುಲ್ ಕಲಾಂ ಆಜಾದ್ ಎಂದು ನಗರದ ಅಲ್-ಅಮೀನ ಚಾರಿಟೇಬಲ್ ಫಂಡ್ ಟ್ರಸ್ಟ್‌ನ ರಿಯಾಜ್ ಫಾರೂಕಿ ಅಭಿಪ್ರಾಯ ವ್ಯಕ್ತಪಡಿಸಿದರು.

ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ಜ್ಞಾನಶಕ್ತಿ ಆವರಣದ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಮೌಲಾನಾ ಆಜಾದ್ ಕೇಂದ್ರದ ವತಿಯಿಂದ ಮೌಲಾನಾ ಅಬುಲ್ ಕಲಾಂ ಆಜಾದ ಅವರ ಜನ್ಮದಿನದ ಅಂಗವಾಗಿ ಸೋಮವಾರ ಹಮ್ಮಿಕೊಂಡಿದ್ದ ರಾಷ್ಟ್ರೀಯ ಶಿಕ್ಷಣ ಆಚರಣೆ ಕಾರ್ಯಕ್ರಮದಲ್ಲಿ ಅವರು ಮುಖ್ಯ ಅತಿಥಿಯಾಗಿ ಮಾತನಾಡಿದರು.

ಧರ್ಮದ ಹೆಸರಿನಲ್ಲಿ ದೇಶವನ್ನು ಒಡೆಯಲು ಸಾಧ್ಯವಿಲ್ಲ. ಭಾರತ ವಿವಿಧತೆಯಲ್ಲಿ ಏಕತೆಯನ್ನು ಹೊಂದಿದ ರಾಷ್ಟ್ರವಾಗಿದೆ. ಇಂತಹ ಸಮಾಜದಲ್ಲಿ ಮೌಲಾನಾ ಅಬುಲ್ ಕಲಾಂ ಅವರು ಅರವತ್ತರ ಮುಪ್ಪಾವಸ್ತೆಯಲ್ಲಿಯೂ ದೇಶ ಕಟ್ಟುವಲ್ಲಿ ನಿರಂತರ ಹೋರಾಟ ನಡೆಸಿದ ಧೀರ ಎಂದು ಅವರು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮಹಿಳಾ ವಿವಿ ಕುಲಪತಿ ಪ್ರೊ.ಸಬಿಹಾ ಮಾತನಾಡಿ, ಮೌಲಾನಾ ಅಬುಲ್ ಕಲಾಂ ಅವರ ಬದುಕಿನ ಮೌಲ್ಯ ಹಾಗೂ ಆಶಯಗಳನ್ನು ವಿದ್ಯಾರ್ಥಿನಿಯರು ಮೈಗೂಡಿಸಿಕೊಂಡು ಶಿಕ್ಷಣದ ಸಂಪೂರ್ಣ ಲಾಭ ಪಡೆಯಬೇಕೆಂದು ಸಲಹೆ ನೀಡಿದರು.

ಇದೇ ಸಂದರ್ಭದಲ್ಲಿ ಕುಲಸಚಿವ ಪ್ರೊ.ಎಲ್.ಆರ್. ನಾಯಕ ಹಾಗೂ ವಿವಿಧ ವಿಭಾಗದ ಪ್ರಾಧ್ಯಾಪಕರು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ, ಸಂಶೋಧನಾ ಮತ್ತು ಸ್ನಾತಕೋತ್ತರ ವಿದ್ಯಾರ್ಥಿನಿಯರು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಸಂಗೀತ ವಿಭಾಗದ ವಿದ್ಯಾರ್ಥಿನಿಯರು ಪ್ರಾರ್ಥಿಸಿದರು. ಮೌಲಾನಾ ಆಜಾದ್ ಕೇಂದ್ರದ ಸಂಯೋಜಕ ಡಾ.ಆರ್.ವಿ. ಗಂಗಶೆಟ್ಟಿ ಸ್ವಾಗತಿಸಿ, ಪ್ರಾಸ್ತಾವಿಕ ನುಡಿಗಳನ್ನಾಡಿದರು. ಇತಿಹಾಸ ವಿಭಾಗದ ಡಾ.ಆನಂದ ಕುಲಕರ್ಣಿ ನಿರೂಪಿಸಿದರು. ಅಹಲ್ಯಾಬಾಯಿ ಮುಜಾವರ ವಂದಿಸಿದರು.

**ಫೋಟೊ ಕ್ಯಾಪ್ಷನ್:**

1) **ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ಜ್ಞಾನಶಕ್ತಿ ಆವರಣದ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಮೌಲಾನಾ ಆಜಾದ್ ಕೇಂದ್ರದ ವತಿಯಿಂದ ಮೌಲಾನಾ ಅಬುಲ್ ಕಲಾಂ ಆಜಾದ ಅವರ ಜನ್ಮದಿನದ ಅಂಗವಾಗಿ ಸೋಮವಾರ ಹಮ್ಮಿಕೊಂಡಿದ್ದ ರಾಷ್ಟ್ರೀಯ ಶಿಕ್ಷಣ ಆಚರಣೆ ಕಾರ್ಯಕ್ರಮದಲ್ಲಿ ನಗರದ ಅಲ್-ಅಮೀನ ಚಾರಿಟೇಬಲ್ ಫಂಡ್ ಟ್ರಸ್ಟ್‌ನ ರಿಯಾಜ್ ಫಾರೂಕಿ ಮುಖ್ಯ ಅತಿಥಿಯಾಗಿ ಮಾತನಾಡಿದರು.**
2) **ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ಜ್ಞಾನಶಕ್ತಿ ಆವರಣದ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಮೌಲಾನಾ ಆಜಾದ್ ಕೇಂದ್ರದ ವತಿಯಿಂದ ಮೌಲಾನಾ ಅಬುಲ್ ಕಲಾಂ ಆಜಾದ ಅವರ ಜನ್ಮದಿನದ ಅಂಗವಾಗಿ ಸೋಮವಾರ ಹಮ್ಮಿಕೊಂಡಿದ್ದ ರಾಷ್ಟ್ರೀಯ ಶಿಕ್ಷಣ ಆಚರಣೆ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿದ್ದ ಮಹಿಳಾ ವಿವಿ ಕುಲಪತಿ ಪ್ರೊ.ಸಬಿಹಾ ಮಾತನಾಡಿದರು.**


ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ
ಮೌಲಾನಾ ಆಜಾದ್ ಕೇಂದ್ರ
ಮೌಲಾನಾ ಅಬುಲ್ ಕಲಾಂ ಆಜಾದರವರ ಜನ್ಮ ದಿನದ ಅಂಗವಾಗಿ
ರಾಷ್ಟ್ರೀಯ ಶಿಕ್ಷಣ ದಿನಾಚರಣೆ
ಸೋಮವಾರ ದಿನಾಂಕ : 13-11-2017 ಬೆಳಿಗ್ಗೆ : 11-00
ಸ್ಥಳ : ಡಾ. ಬಿ.ಆರ್.ಅಂಬೇಡ್ಕರ ಭವನ, ಜ್ಞಾನಶಕ್ತಿ ಆವರಣ, ಅ.ಮ.ವಿ.ವಿ., ವಿಜಯಪುರ
ಮುಖ್ಯ ಅತಿಥಿಗಳು :
ಶ್ರೀ ರಿಯಾಜ್ ಫಾರೂಕಿ
ಟ್ರಸ್ಟಿ, ಅಲ್-ಅಮೀನ ಚಾರಿಟೇಬಲ್ ಫಂಡ್ ಟ್ರಸ್ಟ,
ಅಲ್-ಅಮೀನ ಮೆಡಿಕಲ್ ಕಾಲೇಜ, ವಿಜಯಪುರ
ಅಧ್ಯಕ್ಷರು :
ಪ್ರೊ. ಸಬಿಹಾ
ಕುಲಪತಿಗಳು,
ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ
ಸರ್ವರಿಗೂ ಹಾರ್ದಿಕ ಸ್ವಾಗತ


ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ
ಮೌಲಾನಾ ಆಜಾದ್ ಕೇಂದ್ರ
ಮೌಲಾನಾ ಅಬುಲ್ ಕಲಾಂ ಆಜಾದರವರ ಜನ್ಮ ದಿನದ ಅಂಗವಾಗಿ
ರಾಷ್ಟ್ರೀಯ ಶಿಕ್ಷಣ ದಿನಾಚರಣೆ
ಸೋಮವಾರ ದಿನಾಂಕ : 13-11-2017 ಬೆಳಿಗ್ಗೆ : 11-00
ಮುಖ್ಯ ಅತಿಥಿಗಳು :
ಶ್ರೀ ರಿಯಾಜ್ ಫಾರೂಕಿ
ಟ್ರಸ್ಟಿ, ಅಲ್-ಅಮೀನ ಚಾರಿಟೇಬಲ್ ಫಂಡ್ ಟ್ರಸ್ಟ,
ಅಲ್-ಅಮೀನ ಮೆಡಿಕಲ್ ಕಾಲೇಜ, ವಿಜಯಪುರ
ಅಧ್ಯಕ್ಷರು :
ಪ್ರೊ. ಸಬಿಹಾ
ಕುಲಪತಿಗಳು,
ಸರ್ವರಿಗೂ